ಶ್ರೀ ಟಿ. ಚನ್ನಯ್ಯ:—ನಿಧಾನವಾಗುವುದಕ್ಕೆ ಕಾರಣ ಏನೂ ಖಚಿತವಾಗಿ ಗೊತ್ತಾಗಲಿಲ್ಲ. ಆದರೆ ನಮಗೆ ವರದಿ ಬಂದಿರುವ ಪ್ರಕಾರ ಯಾವ ಏರಿಯಾ ತೆಗೆದು ಕೊಳ್ಳಬೇಕು ಎಂಬ ವಿಷಯದಲ್ಲಿ ಸಂಬಂಧಪಟ್ಟ ಇಲಾಖೆಯವರೊಡನೆ ಪತ್ರ ವ್ಯವಹಾರದಲ್ಲಿ ಸ್ವಲ್ಪ ನಿಧಾನವಾಗಿದೆ. ಆದ್ದರಿಂದ ಕಮಿಷನರ್ ಅವರು ಜಾಗ್ರತೆಯಾಗಿ ಇದನ್ನು ಮಾಡುತ್ತೇವೆಂದು ನಮಗೆ ವರದಿ ಕಳುಹಿಸಿದ್ದಾರೆ.

Short Term Credits from the Central Co-operative Banks (exemption in payment of fees for Encumbrance Certificates).

Q.—358. Sri G. A. THIMMAPPA GOWDA (Arkalgud).—

Will the Government be pleased to state :—

(*a*) whether any representation is made to the Government to exempt registration fee and search fee to obtain encumbrance certificates to the applicants to the Central Co-operative Banks for short term loans ;

(*b*) the action taken in this behalf ?

A.—Dr. R. NAGAN GOWDA (Minister for Agriculture).—

(*a*) Yes.

(*b*) This is under consideration of Government.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಅಲ್ಪಕಾಲಾವಧಿ ಸಾಲಗಳನ್ನು ಪಡೆಯುವಾಗ ರೈತರಿಂದ encumbrance certificates ಮತ್ತು Registration fee ಮನ್ನಾ ಮಾಡುವುದಕ್ಕೆ ಬಂದ ಮನವಿಗಳು ಸರ್ಕಾರದ ಪರ್ಯಾಲೋಚನೆಯಲ್ಲಿವೆ ಎಂದು ಹೇಳಿದ್ದೀರಿ. ಈ ವಿಷಯ ಇದೇ Assemblyಯಲ್ಲಿ ಹಿಂದಿನ ವರ್ಷವೂ ಕೂಡ ಪ್ರಶ್ನೆಗಳ ಮತ್ತು cut motions ಮೂಲಕ ಬಂದಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಬಂದಿತ್ತು. ಈಗ ಅನೇಕ Co-operative Societyಗಳು half fee for encumbrance certificate ಎಂಬ concession ಕೊಟ್ಟಿದ್ದಾರೆ. ಪೂರ್ತಿ ಕೊಡುವ ವಿಷಯ ಆಲೋಚನೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Half fee ಕೊಡುತ್ತಾ ಇರುವುದು Co-operative movement ಹುಟ್ಟಿದ ಲಾಗಾಯಿತು ಇದೆ. ಇದು ಈಚೆಗೆ ಬಂದಿದ್ದಲ್ಲ. ಈಚೆಗೆ half encumbrance ಮತ್ತು Registration feeಯನ್ನು ಪೂರ್ತಾ ಮನ್ನಾ ಮಾಡಬೇಕೆಂದು action ತೆಗೆದುಕೊಂಡಿದ್ದೀರಾ ? ಆ ಮನವಿ consider ಮಾಡಲು ಎಷ್ಟು ವರ್ಷ ಬೇಕಾಗುತ್ತದೆ ?

ಡಾ॥ ಆರ್. ನಾಗನಗೌಡ.—ಸರ್ಕಾರಕ್ಕೆ ಬರುವ ರೆವೆನ್ಯೂ ಬಹಳ ಕಡಿಮೆಯಾಗಿರುವುದರಿಂದ ಈ ಪ್ರಶ್ನೆಯನ್ನು ಸ್ವಲ್ಪ ಆಲೋಚನೆ ಮಾಡಬೇಕಾಗಿ ಬಂದಿದೆ. ಕೆಲವು Land Mortgage Banks, Rural Co-operative Societyಗಳು ಇವುಗಳ ವಿಚಾರದಲ್ಲಿ encumbrance certificatesಗಳನ್ನು ಪೂರ್ತಿ ಬಿಟ್ಟುಬಿಟ್ಟಿದ್ದೇವೆ. ಇದಕ್ಕೂ ಕೊಡಬೇಕಾಗಿಲ್ಲವೇ ಎಂಬ ವಿಚಾರದಲ್ಲಿ 'financial position'ನನ್ನು ಆಲೋಚನೆ ಮಾಡುತ್ತೇವೆ.

12-30 P.M.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಈ ಅಲ್ಪ ಕಾರಾವಧಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಈ ರಿಯಾಯಿತಿ ತೋರಿಸುವುದರಿಂದ ಸರ್ಕಾರದವರಿಗೆ ಎಷ್ಟು ಹಣ ಲುಕ್ಸಾನಾಗುತ್ತದೆ ?

ಡಾ॥ ಆರ್. ನಾಗನಗೌಡ.—ಈಗ ಇದರಿಂದ financial commitment ಎಷ್ಟಾಗುತ್ತದೆಂದು calculate ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಇದರ ಕಾರ್ಯ ಚಟುವಟಿಕೆ increase ಆಗುತ್ತಿದೆ ; ಅರ್ಜಿಗಳೂ ಹೆಚ್ಚಾಗುತ್ತಿವೆ. ಆದ್ದರಿಂದ calculate ಮಾಡುವುದಕ್ಕಾಗುವುದಿಲ್ಲ. ಆದರೂ ಈ encumbrance certificateಗಳನ್ನು ತೆಗೆದುಕೊಳ್ಳುವುದರಲ್ಲಿ concession ಕೊಡುವ ವಿಷಯವನ್ನು ಸರ್ಕಾರದವರು active ಆಗಿ ಯೋಚನೆ ಮಾಡುತ್ತಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಸಹಾಯ ಮಾಡಬೇಕೆಂಬ ಒಂದು ಉದ್ದೇಶವಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Short Term Loan ಅವಧಿ ಒಂದು ವರ್ಷ ಮಾತ್ರ ಇರುವುದರಿಂದ ರೈತರಿಗೆ ಹೆಚ್ಚಿಗೆ ಸಾಲಗಳನ್ನು ಕೊಡಿಸಬೇಕು, ಅವರಿಗೆ ಉಪಕಾರ ಮಾಡಬೇಕು, ವ್ಯವಸಾಯವನ್ನು ಅಭಿವೃದ್ಧಿ ಮಾಡಬೇಕು ಎಂಬ ಉದ್ದೇಶವಿರುವಾಗ, ಈ ರೀತಿ ರೈತರಿಗೆ encumbrance certificateನ್ನು ತೆಗೆದು ಕೊಳ್ಳುವುದಕ್ಕೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಲಂಚ ಮುಂತಾದುವನ್ನು ಕೊಡಬೇಕಾಗಿ ಬಂದು ಸಾಲಗಳು ನಲಿಸಾಗಿ ದೊರೆಯುತ್ತಿಲ್ಲವೆಂಬುದು, ತಮ್ಮ ಉದ್ದೇಶ ನೆರವೇರುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಅದು ಗೊತ್ತಾಗಿದೆ. ಅದನ್ನು ಹೇಗೆ ಸರಿಪಡಿಸಬೇಕೆಂದು ತೀವ್ರವಾಗಿ ಆಲೋಚನೆ ಮಾಡುತ್ತೇವೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—Short term loan ಕೊಡುವ ಏರ್ಪಾಡು ಮಾಡಿದ್ದೀರಲ್ಲಾ, ಈ ಸಂದರ್ಭದಲ್ಲಿ ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಂಡ ಹಣಕ್ಕೆ ತಾವು ಕೊಡುವ ದರಕ್ಕೂ ಸೊಸೈಟಿಗೆ ತಾವು ಕೊಡುವ ದರಕ್ಕೂ ಶೇಕಡ ಎರಡರಷ್ಟು ತಮಗೆ ಹಣ ಉಳಿತಾಯವಾಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.— ಹಾಗೆ ಯಾವ ಆದಾಯವೂ ಸರ್ಕಾರಕ್ಕಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ರಿಸರ್ವ್ ಬ್ಯಾಂಕಿನಿಂದ ನಿಮಗೆ ಎಷ್ಟು ಪರ್ಸೆಂಟಿಗೆ ಸಾಲ ಸಿಕ್ಕುತ್ತಿದೆ ; ನೀವು ಎಷ್ಟು ಪರ್ಸೆಂಟಿಗೆ ಕೊಡುತ್ತಿದ್ದೀರಿ ?

Mr. SPEAKER.—It does not arise. All that cannot be disclosed here.

Question Nos. 14, 231, 276, 333, 379 will be taken up together.